**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 251/2023** **ಪ್ರಾ.ಸಾ –1**
**ಚಾ.ಸಾ – 1**

**ದಿನಾಂಕಃ 29.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಭಾಗ್ಯ |
| ಗಂಡನ ಹೆಸರು | : | ಸಿದ್ದಪ್ಪ ಹೆಚ್ ಎ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಾಸ ಸ್ಥಳ | : | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ದಿ. 22.07.2019 ರಿಂದ 31.01.2025 ರ ತನಕ ವಿರಾಜಪೇಟೆ ವಲಯ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 11.08.2022 ರಂದು ನಾನು ನನ್ನ ಸಹಸಿಬ್ಬಂದಿಯೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆ.ಎ.12.ಜಿ.0824 ನಲ್ಲಿ ಕಾನೂರು ಗ್ರಾಮದಲ್ಲಿ ಸುಮಾರು 04.15 ಗಂಟೆಗೆ ಗಸ್ತು ಮಾಡುತ್ತಿದ್ದಾಗ ಬಂದ ಖಚಿತ ಮಾಹಿತಿ ಏನೆಂದರೆ ಮಲ್ಲಂಗೇರಿ ಪೈಸಾರಿ ಗ್ರಾಮದ ಜೆ. ಆರ್ ಗಣಪತಿಯವರು ಮಧ್ಯವನ್ನು ಮಾರಾಟ ಮಾಡಲು ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ಬಂದಿದ್ದು, ಸದರಿ ಮಾಹಿತಿಯ ಮೇರೆಗೆ ನಾವೆಲ್ಲರೂ ಕಾರ್ಯ ಪ್ರವೃತ್ತರಾಗಿ ಸದರಿ ಸ್ಥಳಕ್ಕೆ ಹೋಗುವ ಮುನ್ನ ದಾರಿಯಲ್ಲಿ ಇದ್ದಂತಹ ಕೆಲವು ವ್ಯಕ್ತಿಗಳನ್ನು ಪರಿಚಯಮಾಡಿಕೊಂಡು ಮನೆಯನ್ನು ತೋರಿಸಲು ಕೋರಿದಾಗ ಒಪ್ಪಿಕೊಂಡು ಸದರಿಯವರು ಒಪ್ಪಿಕೊಂಡು ಮನೆಯನ್ನು ತೋರಿಸಿರುತ್ತಾರೆ.

ಸದರಿಯವರಿಗೆ ನಾವು ಬಂದಿರುವ ವಿಚಾರ ತಿಳಿಸಿ ಪಂಚರಾಗಲು ಕೋರಿದಾಗ ಸದರಿಯವರು ಪಂಚರಾಗಲು ನಿರಾಕರಿಸಿರುತ್ತಾರೆ. ನಂತರ ಇಲಾಖಾ ಸಿಬ್ಬಂದಿಯವರನ್ನು ಪಂಚರನ್ನಾಗಿಸಿ ಮನೆಯ ಮುಂದೆ ತೆರಳಿದಾಗ ಮನೆಯ ಮುಂದೆ ಒಬ್ಬ ವ್ಯಕ್ತಿ ನಿಂತಿದ್ದು ಅವರನ್ನು ವಿಚಾರಿಸಿದಾಗ ಅವರ ಹೆಸರು, ವಿಳಾಸ ತಿಳಿಸಿರುತ್ತಾರೆ. ಸದರಿಯವರ ಮನೆಯನ್ನು ಶೋಧನೆ ಮಾಡಲು ಶೋಧನಾ ವಾರೆಂಟ್ ಪಡೆಯಲು ಮಾನ್ಯ ನ್ಯಾಯಾಲಯದ ಅನುಮತಿ ಪಡೆಯಲು ಸಾಧ್ಯವಾಗದ ಕಾರಣ ಸ್ಥಳದಲ್ಲಿ ಶೋಧನಾ ವಾರೆಂಟ್ ಸಿದ್ದಪಡಿಸಿಕೊಂಡು ಮನೆಯ ಒಳಗೆ ತೆರಳಿದಾಗ ಒಂದು ಮರದ ಕಾಟ್ ಕೆಳಗಡೆ ರೆಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂತು.

ಸದರಿ ರೆಟ್ಟಿನ ಪೆಟ್ಟಿಗೆಯನ್ನು ನೋಡಲಾಗಿ Original choice whiskey ಅವುಗಳನ್ನು ನೋಡಲಾಗಿ ಬ್ಯಾಚ್ ನಂಬರ್ 59 ಎಂದು ನಮುದಾಗಿದ್ದು ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ಎಣಿಸಲಾಗಿ 90 ಮಿಲಿಯ 68 ಟೆಟ್ರಾ ಪ್ಯಾಕೆಟ್‌ಗಳು ಇರುವುದು ಕಂಡು ಬಂತು. ಈ ರೀತಿ ಶೇಖರಣೆ ಮಾಡಲು ಯಾವುದಾದರೂ ರಹದಾರಿ ಇದೆಯೇ ಎಂದು ಕೇಳಲಾಗಿ ಸದರಿಯವರು ಇಲ್ಲ ಎಂದು ತಿಳಿಸಿದರು. ಅವರು ಈ ರೀತಿ ಮಧ್ಯವನ್ನು ಇಟ್ಟುಕೊಳ್ಳುವುದು ಅಬಕಾರಿ ಕಾಯ್ದೆ ಪ್ರಕಾರ ಅಪರಾಧವೆಂದು ತಿಳಿಸಿ ಸದರಿಯವರಿಂದ ಮಧ್ಯವನ್ನು ನಮ್ಮ ವಶಕ್ಕೆ ಪಡೆದು ಒಂದು ರೆಟ್ಟಿನ ಪೆಟ್ಟಿಗೆಯ ಬಾಕ್ಸ್ ನಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಹೊಲೆದು ಅರಗಿನಿಂದಸೀಲು ಮಾಡಲಾಯಿತು.

ನಂತರ ಮಾದರಿ ಚೀಟಿಗಳನ್ನು ಸಿದ್ದಪಡಿಸಿಕೊಂಡು ಸಹಿ ಪಡೆದು ಅಂಟಿಸಲಾಯಿತು. ಸದರಿಯವರಿಗೆ ಸಿಆರ್‌ಪಿಸಿ 41 ಪ್ರಕಾಣ ಜಾಮೀನಿನ ಮೇಲೆ ಬಿಡುಗಡೆ ಮಾಡಿ ಮಹಜರ್ ಅನ್ನು ಸಂಜೆ 04.30 ರಿಂದ 05.30 ರತನಕ

ಮಾಡಲಾಯಿತು. ಮದ್ಯವನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ದಿ. 12.09.2022 ರಂದು ಅಬಕಾರಿ ಉಪ ನಿರೀಕ್ಷಕರು, ಅಬಕಾರಿ ಉಪಾಧೀಕ್ಷಕರ ಕಚೇರಿ ವಿರಾಜಪೇಟೆ ಉಪವಿಭಾಗ ಅವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ಶೋಧನಾ ವಾರೆಂಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ. ಪಿ 1 ಎಂದು ಗುರುತಿಸಲಾಗಿದೆ. ಸಹಿಯನ್ನು ನಿ. ಪಿ. 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 2 ಎಂದು ನಿ. ಪಿ. 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವರದಿ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 5 ಎಂದು ನಿ. ಪಿ. 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ರೆಟ್ಟಿನ ಪೆಟ್ಟಿಗೆಯನ್ನು ನೋಡಿ ಗುರುಸಿತಿದ್ದು ಅದನ್ನು ಮು. ಮಾ 1 ಎಂದು, ಸಾಕ್ಷಿಯು 68 Original choice whiskey ಟೆಟ್ರಾ ಪ್ಯಾಕೆಟ್‌ಗಳನ್ನು ನೋಡಿ ಗುರುಸಿತಿದ್ದು ಅವುಗಳನ್ನು ಒಟ್ಟಾಗಿ ಮು. ಮಾ 2 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ. ಎಸ್. ಎಸ್ ವಕೀಲರಿಂದಃ</u>

ನಮ್ಮ ಕಚೇರಿ ವಿರಾಜಪೇಟೆಯಲ್ಲಿದೆ. ಸಾಯಂಕಾಲ 04.30 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಕಾನೂರಿನಿಂದ ಘಟನಾ ಸ್ಥಳ 5 ಕಿ. ಮೀ ದೂರ. ಆರೋಪಿಯ ಮನೆಯ ಅಕ್ಕಪಕ್ಕ ಇತರೇ ಮನೆಗಳಿವೆ ಎಂದರೆ ಸರಿ. ಮದ್ಯ ಆರೋಪಿಯ ಮನೆಯ ಹಾಲ್ ನಲ್ಲಿ ಸಿಕ್ಕಿರುತ್ತದೆ. ಆರೋಪಿಯ ಮನೆಯಲ್ಲಿ ಕೋಣೆಗಳು ಇರಲಿಲ್ಲ. ಹಾಲ್ ನಲ್ಲಿ ಮಂಚದ ಕೆಳಗಡೆ ಮದ್ಯವಿತ್ತು. ಅಕ್ಕಪಕ್ಕದ ಮನೆಯವರು ಮಹಜರ್‌ಗೆ ಸಹಕರಿಸಲಿಲ್ಲ.

ಅಮಾನತುಗೊಳಿಸಿದ ಮೇಲೆ ಮಧ್ಯದ ಮೇಲೆ ಪಂಚರ ಸಹಿ ಪಡೆಯಲಿಲ್ಲ. ಮಹಜರ್ ನಲ್ಲಿ ಬ್ಯಾಚ್ ನಂಬರ್ ನಮೂದಿಸಿರುತ್ತೇವೆ. ಮು. ಮಾ 1 ರೆಟ್ಟಿನ ಬಾಕ್ಸ್ ಮತ್ತು ಮು. ಮಾ 2 ಮಧ್ಯ ಆರೋಪಿಯ ವಶದಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಮು. ಮಾ 1 ಮತ್ತು 2 ಅನ್ನು ಬೇರೆ ಕಡೆಯಿಂದ ತಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಯಾವುದೇ ಕ್ರಮಗಳನ್ನು ಕೈ ಗೊಂಡಿಲ್ಲ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.